**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.**

**ಎಸ್.ಸಿ. 4/2024**

1. ವಡಗೇರಾ ಪೊಲೀಸಠಾಣೆ ....ಫಿರ್ಯಾದಿ

ವಿರುದ್ಧ

1. ದೇವಮ್ಮ .....ಆರೋಪಿತಳು

## <u>ದೋಷಾರೋಪಣೆ</u>

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ದೇವಮ್ಮ ಗಂಡ ಸಿದ್ದಪ್ಪ ಚೆಟ್ಟಿಗೇರಿ, ವಯಸ್ಸು: 35 ವರ್ಷ, ಉದ್ಯೋಗ: ಹೊಲಮನೆಕೆಲಸ ಸಾ: ಬಬಲಾದ ತಾ: ವಡಗೇರಾ ಜಿ: ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಚಾಸಾ-1 ರವರು ಚಾಸಾ-10 ರವರನ್ನು ಸುಮಾರು 11 ವರ್ಷಗಳಿಂದ ಮದುವೆ ಮಾಡಿಕೊಂಡಿದ್ದು ಚಾಸಾ-1 ರವರಿಗೆ ಅನಾರೋಗ್ಯವಾಗಿದ್ದರಿಂದ ಮಕ್ಕಳಾಗದೆ ಇದ್ದುದರಿಂದ ಸುಮಾರು 7 ವರ್ಷಗಳ ಹಿಂದೆ ಚಾಸಾ-10 ಇವರು ನಿಮ್ಮನ್ನು 2 ನೇ ಮದುವೆ ಮಾಡಿಕೊಂಡಿದ್ದು ನಿಮ್ಮ ವೈವಾಹಿಕ ಜೀವನದಿಂದಾಗಿ 4 ಮಕ್ಕಳು ಜನಿಸಿದ್ದು 3 ವರ್ಷಗಳ ನಂತರ ಚಾಸಾ-10 ರವರು ಚಾಸಾ-1 ರವರ ಮನಹೋಲಿಸಿ ಪುನ: ಮನೆಗೆ ಕರೆದುಕೊಂಡು ಬಂದು ಇಟ್ಟುಕೊಂಡಿದ್ದು ಚಾಸಾ-1 ಮತ್ತು 10 ರವರಿಗೆ ಕುಮಾರಿ ಸಂಗೀತಾ ಎನ್ನುವ ಹೆಣ್ಣು ಮಗು ಜನಸಿದ್ದು ಆ ಹೆಣ್ಣುಮಗುವಿಗೆ ಬಬಲಾದಿ ಸೀಮಾಂತರದಲ್ಲಿ ಇರುವ ಸರ್ವೇ ನಂಬರ 145/3 ರಲ್ಲಿ 29 ಗುಂಟೆ, ಸರ್ವೇ ನಂಬರ 144 ರಲ್ಲಿ 2 ಎಕರೆ 01 ಗುಂಟೆ ಜಮೀನು ಇದ್ದು ಸದರಿ ಜಮೀನನ ಆಸ್ತಿ ಎಲ್ಲ ನಿನ್ನ ಮಕ್ಕಳಿಗೆ ದಕ್ಕಬೇಕು ಎಂಬ ಉದ್ದೇಶದಿಂದ ಏಗಾದರು ಮಾಡಿ ಕುಮಾರಿ ಸಂಗೀತಾಳನ್ನು ಕೊಲೆ ಮಾಡಿದರೆ ನಿನ್ನ ಮಕ್ಕಳಿಗೆ ಸದರಿ ಜಮೀನು ಸಿಗುತ್ತದೆ ಎಂದು ದಿ: 30.08.2023 ರಂದು ಬೆಳಿಗ್ಗೆ 09.00 ಗಂಟೆ ಸುಮಾರು ಕುಮಾರಿ ಸಂಗೀತಾಳಿಗೆ ಹಾಲು ಕುಡಿಸುವ ನೆಪದಲ್ಲಿ ಮನೆ ಒಳಗಡೆ ಹೋಗಿ ಬಾಗಿಲು ಮುಚ್ಚಿಕೊಂಡು ಮನೆಯಲ್ಲಿ ಬಚ್ಚಿ ಇಟ್ಟಿದ್ದ ನ್ಯಾನೋ ಯೂರಿಯಾ ವಿಷಯವನ್ನು ಹಾಲಿಗೆ ಹಾಕಿ ನಿಪ್ಪಲ್ ಹಾಲಿನ ಬಾಟಲನಲ್ಲಿ ಹಾಕಿ ಕುಮಾರಿ ಸಂಗೀತಾಳಿಗೆ ಕುಡಿಸಿದ್ದು ಅದರ ಪರಿಣಾಮ ಸದರಿ ಸಂಗೀತಾ ಆ ಹಾಲಿನೊಂದಿಗೆ ವಿಷಯವನ್ನು ಕುಡಿದು ಮೃತ ಪಟ್ಟಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 302 ರಡಿಯಲ್ಲಿ ದಂಡನೀಯ

ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2 ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ನ್ಯಾನೋ ಯೂರಿಯಾ ಬಾಟಲನ್ನು ತೆಗೆದುಕೊಂಡು ಹೊಲದಲ್ಲಿ ಇಟ್ಟು ನಾಶಪಡಿಸಲು ಪ್ರಯತ್ನಿಸಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 201 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ **16.07.2025** ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.